ಹೊಸ ದಿಗಂತ

# ಎನ್‌ಇಪಿಯಿಂದ ಮಕ್ಕಳ ಸಮಗ್ರ ಬೆಳವಣಿಗೆ

## ಶತಮಾನೋತ್ತರ ಸುವರ್ಣ ಸಂಭ್ರಮ | ಸಚಿವ ಪ್ರಹ್ಲಾದ ಜೋಶಿ ಅಭಿಮತ



**ಧಾರವಾಡ:** ಮಕ್ಕಳ ಭವಿಷ್ಯದ ದೃಷ್ಟಿಯಿಂದ ಶಾಲಾ ಶಿಕ್ಷಣದಲ್ಲಿಯೇ ಕೌಶಲ್ಯ ಕಲಿಕೆ ಆಗತ್ಯವಿದೆ. ಇದನ್ನು ರಾಷ್ಟ್ರೀಯ ಶಿಕ್ಷಣ ನೀತಿ ಪೂರೈಸಲಿದೆ. ಈ ನೀತಿ ಮಕ್ಕಳ ಸಮಗ್ರ ಬೆಳವಣಿಗೆ ಸಹಕಾರಿ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅಭಿಪ್ರಾಯಪಟ್ಟರು.

ತಾಲೂಕಿನ ಉಪ್ಪಿನಬೆಟಗೇರಿ ಗ್ರಾಮದ ಸರ್ಕಾರಿ ಮಾದರಿ ಗಂಡು ಮಕ್ಕಳ ಶಾಲೆಯ ಶತಮಾನೋತ್ತರ ಸುವರ್ಣ ಮಹೋತ್ಸವ ಉದ್ಘಾಟಿಸಿದ ಅವರು, 157 ವರ್ಷದ ಈ ಶಾಲೆಯು ಸಮಾಜಕ್ಕೆ ಅದೆಷ್ಟೋ ವಿದ್ಯಾರ್ಥಿಗಳನ್ನು ಕೊಡುಗೆ ನೀಡಿದಕ್ಕೆ ಸಂತಸ ವ್ಯಕ್ತಪಡಿಸಿದರು.

ಭಾರತ ಯುವ ಶಕ್ತಿ ಹೊಂದಿದ ದೇಶ. ಇಲ್ಲಿ ಶೇ.65ರಷ್ಟು ಯುವಜನರಿದ್ದು, ನಮ್ಮ ದೇಶದಲ್ಲಿ ವೃದ್ಧರೂ ದುಡಿಮೆ ಮಾಡುತ್ತಾರೆ. ದೇಶದ ಬೆಳವಣಿಗೆಗೆ ವಿದ್ಯಾರ್ಥಿಗಳಲ್ಲಿ ಕೌಶಲ್ಯ ಬೆಳೆಸಬೇಕಿದೆ. ಇದಕ್ಕೆ ಶಾಲಾ ಶಿಕ್ಷಣದಲ್ಲಿ ಎನ್‌ಇಪಿ ಅಳವಡಿಸಿದೆ ಎಂದು ತಿಳಿಸಿದರು.

ದೇಶದಲ್ಲಿ ಅನೇಕ ಉನ್ನತ ವಿಶ್ವವಿದ್ಯಾಲಯಗಳು ಇದ್ದವು. ನಳಂದ, ತಕ್ಷಶಿಲಾ, ವಾರಾಣಸಿ ಇವು ಜಗತ್ತಿನ ಶ್ರೇಷ್ಠ ವಿಶ್ವವಿದ್ಯಾಲಯ. ನಮ್ಮ ಕೇಂದ್ರ ಸರ್ಕಾರವು ಬಡವರ ಹಿತಕ್ಕಾಗಿ, ದೇಶದ ಸುರಕ್ಷತೆ ಮತ್ತು ಭ್ರಷ್ಟಾಚಾರ ಮುಕ್ತ ಆಡಳಿತ ನೀಡಿದೆ ಎಂದರು. 'ಹರ್ ಘರ್ ಜಲ್ ಯೋಜನೆ' ಜಗತ್ತಿನ ಗಮನ ಸೆಳೆಯುತ್ತಿದೆ. ಪ್ರಪಂಚದಲ್ಲಿ ಇತರೆ ದೇಶಗಳು ಕೋವಿಡ್ ನಂತರ ಆರ್ಥಿಕತೆ ದಾರಿ ತಪ್ಪಿದೆ. ಭಾರತ ಆರ್ಥಿಕತೆಯಲ್ಲಿ ಬ್ರಿಟನ್ ದೇಶ ಹಿಂದಿಕ್ಕಿ ಮುಂದೆ ಸಾಗುತ್ತಿದೆ. ಇದು ಮೋದಿ ಅವರಿಗೆ ಸಂದ ಕೀರ್ತಿ ಎಂದರು.

ಸಭಾಪತಿ ಬಸವರಾಜ ಹೊರಟ್ಟಿ, ಉಪ್ಪಿನಬೆಟಗೇರಿ ಮಾದರಿ ಗಂಡು ಮಕ್ಕಳ ಶಾಲೆ ದೇಶಕ್ಕೆ ಮತ್ತು ನಾಡಿಗೆ ಉತ್ತಮ ಕಾಣಿಕೆ ನೀಡಿದೆ. ಮುಖ್ಯವಾಗಿ ಹೆಣ್ಣು ಮಕ್ಕಳು ಶಿಕ್ಷಣ ಪಡೆಯಬೇಕಿತ್ತು. ಇದು ಆಗಿದ್ದರೆ, ದೇಶ ತುಂಬಾ ಪ್ರಗತಿ ಕಾಣುತಿತ್ತು ಎಂದು ತಿಳಿಸಿದರು.

157 ವರ್ಷ ಪೂರೈಸಿದ ಸವಿ ನೆನಪಿಗಾಗಿ ಮತ್ತೊಂದು ಕಟ್ಟಡವನ್ನು ನಿರ್ಮಾಣ ಮಾಡೋಣ, ಈ ಶಾಲೆಯ ದೊಡ್ಡ ಸಾಧನೆ ಇದು. ಶಾಲೆಯಲ್ಲಿ ತಂದೆ, ತಾಯಿ, ಕುಟುಂಬ, ಸಮಾಜ ಹಾಗೂ ಸಂಸ್ಕಾರದ ಬಗ್ಗೆ ಕಲಿಸಬೇಕು ಎಂದು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ತವನಪ್ಪ ಅಷ್ಟಗಿ ಸಮಾರಂಭದಲ್ಲಿ, ಶಾಸಕ ಅಮೃತ ದೇಸಾಯಿ, ಮಾಜಿ ಶಾಸಕಿ ಸೀಮಾ ಮಸೂತಿ, ಜಿಪಂ, ತಾಪಂ ಸದಸ್ಯರು, ಗ್ರಾಪಂ ಸದಸ್ಯರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.